

بسم اللہِ الرّحمٰن الرّحیم

# ತಹ್‌ರೀಕ್ ಜದೀದ್ 2021–22

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **05–11–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನು ಸತ್ಯವಿಶ್ವಾಸಿಗಳ ವೈಶಿಷ್ಟ್ಯಗಳನ್ನು ಹೇಳಿರುವುದರಲ್ಲಿ ಒಂದೇನೆಂದರೆ, ಅವರು ತಮ್ಮ ಪರಿಶುದ್ಧ ಧನದಿಂದ ಅಲ್ಲಾಹನ ಸಂಪ್ರೀತಿಗಾಗಿ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೆ. ಸತ್ಯವಿಶ್ವಾಸಿಗಳು ತಮ್ಮ ಸಂಪತ್ತನ್ನು ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುತ್ತಾರೆ ಎಂದು ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಒಂದೆಡೆ ಹೇಳಿರುವಾಗ, ಮತ್ತೊಂದೆಡೆ ಝಕಾತ್ ಮತ್ತು ದಾನಧರ್ಮಗಳಿಗೆ ಸಂಬಂಧಿಸಿ ಧನತ್ಯಾಗದ ಬಗ್ಗೆಯೂ ಪ್ರಸ್ತಾಪಿಸಿದ್ದಾನೆ. ಅದೇ ರೀತಿಯಲ್ಲಿ ಸಂಪತ್ತನ್ನು ಎಲ್ಲಿ ಖರ್ಚು ಮಾಡಬೇಕು ಎಂದೂ ಅಲ್ಲಾಹನು ವಿಶದವಾಗಿ ತಿಳಿಸಿದ್ದಾನೆ. ಅಲ್ಲಾಹನ ಏಕತೆಯ ಮತ್ತು ಹಝ್ರತ್ ಪೈಗಂಬರ್(ಸ)ರ ಹಾಗೂ ಇಸ್ಲಾಮಿನ ಧ್ವಜವನ್ನು ಲೋಕದಲ್ಲಿ ಹಾರಿಸುವ ಗುರಿಯನ್ನು ಸಾಧಿಸುವ ಉದ್ದೇಶದಿಂದ ಹಝ್ರತ್ ಮಸೀಹ್ ಮೌಊದ್(ಅ) ಬಂದಿರುವರು. ಈ ವಿಶಾಲವಾದ ಕೆಲಸವನ್ನು ಈಡೇರಿಸಲಿಕ್ಕಾಗಿ ಅಹ್ಮದೀ ಸಹೋದರರು ಲೋಕದೆಲ್ಲೆಡೆ ಧನತ್ಯಾಗದ ಉತ್ತಮ ಮಾದರಿಯನ್ನು ಮುಂದಿರಿಸುತ್ತಾರೆ. ಈ ಉದಾಹರಣೆಯನ್ನು ನೋಡಿ, ಖಂಡಿತವಾಗಿಯೂ ಹಝ್ರತ್ ಮಸೀಹ್ ಮೌಊದ್(ಅ) ಕೊನೆಗಾಲದಲ್ಲಿ ಇಸ್ಲಾಮಿನ ಸುಂದರ ಶಿಕ್ಷಣವನ್ನು ಲೋಕದಲ್ಲಿ ಹರಡಲು ಅಲ್ಲಾಹನು ಕಳುಹಿಸಿದ ಅಲ್ಲಾಹನ ಪ್ರವಾದಿಯೇ ಆಗಿರುವರು ಎಂಬ ವಿಶ್ವಾಸವು ಒಬ್ಬ ವ್ಯಕ್ತಿಯೊಳಗೆ, ಹಿಂದಿಗಿಂತ ಹೆಚ್ಚು ದೃಢವಾಗುತ್ತದೆ. ಅಹ್ಮದಿಯ್ಯತ್ತಿನ ಶತ್ರುಗಳು ತಮ್ಮ ಹೃದಯಗಳಲ್ಲಿ ಇರುವ ಹಗೆಗಳನ್ನು ತೊರೆದು ಈ ಒಂದು ಕಾರ್ಯವನ್ನೇ ನೋಡುವುದಾದರೆ, ಅಹ್ಮದಿಯ್ಯತ್ತಿನ ಸತ್ಯತೆಯ ಈ ಒಂದು ದೃಷ್ಟಾಂತವೇ ಅವರ ಹೃದಯಗಳನ್ನು ಪರಿಶುದ್ಧಗೊಳಿಸುವುದು. ಆದರೆ ಈ ನಾಮಧಾರಿಗಳಾದ ಉಲೇಮಗಳ ಹೃದಯಗಳು ಬಂಡೆಕಲ್ಲುಗಳಿಗಿಂತಲೂ ಕಠಿಣವಾಗಿವೆ.

ಅಹ್ಮದಿಯ ಜಮಾಅತ್ ಕೋಟಿಪತಿಗಳು ಇರುವ ಜಮಾಅತ್ ಏನೂ ಅಲ್ಲ. ಈ ಜಮಾಅತಿನಲ್ಲಿರುವ ಹೆಚ್ಚಿನವರು ಬಡವರು ಮತ್ತು ಮಧ್ಯಮ ವರ್ಗದವರಾಗಿರುವರು. ಹೀಗಿದ್ದರೂ ತ್ಯಾಗದ ಒಂದು ಆವೇಶ ಅವರೊಳಗೆ ಇದೆ. ಅಹ್ಮದಿಯಾ ಜಮಾಅತ್ ತನ್ನ ಪರಿಮಿತವಾದ ಮಾರ್ಗಗಳಿಂದ ಮತ್ತು ಸಾಧನಸಾಮಗ್ರಿಗಳಿಂದ ಯಾವುದೇ ಕೆಲಸವನ್ನು ಶುರುಮಾಡುವುದಾದರೂ ಅಲ್ಲಾಹನು ಅದರಲ್ಲಿ ಅನುಗ್ರಹವನ್ನು ಸುರಿಸುತ್ತಾನೆ.

ಜಮಾಅತ್ ದೊಡ್ಡದಾಗುವಾಗ ವಿವಿಧ ರೀತಿಯ ಯೋಚನೆಯಿರುವವರು ಜಮಾಅತಿನಲ್ಲಿ ಇರುತ್ತಾರೆ. ನಾವು ಏಕೆ ಮತ್ತು ಯಾವುದಕ್ಕಾಗಿ ಚಂದಾ ನೀಡಬೇಕು ಎಂದು ಪ್ರಶ್ನಿಸುವ ಕಡಿಮೆ ತರಬೇತಿ ಹೊಂದಿರುವ ನವ ಅಹ್ಮದಿಯರನ್ನು ಅಥವಾ ಹಳೆಯ ಅಹ್ಮದಿಯರಲ್ಲೂ ಕಡಿಮೆ ತರಬೇತಿ ಹೊಂದಿರುವ ಜನರನ್ನು ನಾವು ನೋಡುತ್ತೇವೆ. ಇಂತಹ ಜನರು ಮನೆಗಳಲ್ಲಿ ಮಕ್ಕಳ ಮುಂದೆಯೂ ಈ ರೀತಿಯ ಮಾತುಗಳನ್ನು ಆಡುತ್ತಾರೆ. ಹೀಗೆ ಮಕ್ಕಳ ಮನಸ್ಸಿನಲ್ಲೂ ಸವಾಲು ಏಳಲು ಶುರುವಾಗುತ್ತದೆ. ಆದ್ದರಿಂದ ಹುದ್ದೇದಾರರು ತಮ್ಮ ವರ್ತನೆ ಮತ್ತು ಕೆಲಸಗಳಿಂದ ಜನರ ಸಂಶಯಗಳನ್ನು ದೂರಮಾಡಬೇಕು. ಜನರು ನೀಡುವ ಚಂದಾವನ್ನು ವಿಶೇಷವಾದ ಕೆಲಸಕ್ಕಾಗಿ ಖರ್ಚು ಮಾಡಲಾಗುತ್ತದೆ ಎಂಬ ಭರವಸೆ ಜನರ ಮನಸ್ಸಿನಲ್ಲಿ ಮೂಡುವಂತೆ ಮಾಡಬೇಕು. ಈ ಧನತ್ಯಾಗಕ್ಕೆ ಅಲ್ಲಾಹನ ದೃಷ್ಟಿಯಲ್ಲಿ ಎಷ್ಟು ಪ್ರಾಧಾನ್ಯವಿದೆ ಮತ್ತು ಈ ಧನತ್ಯಾಗ ಮಾಡುವುದರ ಪ್ರತಿಫಲವಾಗಿ ಅಲ್ಲಾಹನ ಸಂಪ್ರೀತಿ ಲಭಿಸುವುದೆಂದು ಜನರಿಗೆ ಪ್ರೀತಿಯಿಂದ ತಿಳಿಸಬೇಕು. ಈ ಧನತ್ಯಾಗವನ್ನು ಇಸ್ಲಾಮಿನ ಪ್ರಚಾರಕ್ಕಾಗಿ ಖರ್ಚು ಮಾಡಲಾಗುತ್ತದೆ, ನಮ್ಮ ಟಿ.ವಿ ಚಾನೆಲ್‌ಗಾಗಿ, ಮುಬಲ್ಲಿಗರ ಶಿಕ್ಷಣ ಮತ್ತು ಅವರ ಮೂಲಕ ನಡೆಯುವ ತಬ್ಲೀಗ್‌ಗಾಗಿ ಖರ್ಚು ಮಾಡಲಾಗುತ್ತದೆ. ಮಸೀದಿಗಳ ನಿರ್ಮಾಣವಾಗುತ್ತವೆ. ಪುಸ್ತಕಗಳು ಪ್ರಕಾಶನಗೊಳ್ಳುತ್ತವೆ. ಬಡ ಮಕ್ಕಳ ಶಿಕ್ಷಣ ಮತ್ತು ಹಸಿದವರಿಗೆ ಆಹಾರ ಒದಗಿಸಲಿಕ್ಕಾಗಿ ಈ ಧನತ್ಯಾಗಗಳಿಂದ ಖರ್ಚು ಮಾಡಲಾಗುತ್ತದೆ.

ಜಮಾಅತಿನಲ್ಲಿ ಈ ಕುರಿತು ಬಹಳಷ್ಟು ಸವಾಲುಗಳು ಏಳಲು ಶುರುವಾಗಿವೆ ಎಂಬ ಕಾರಣದಿಂದ ನಾನು ಇದನ್ನು ಹೇಳುತ್ತಿಲ್ಲ. ಬದಲಾಗಿ ಜಮಾಅತ್ ಹರಡುವಾಗ, ಹರಡುವ ಕಾರಣದಿಂದ ಕೆಡುಕುಗಳನ್ನು ಹರಡುವವರು ಮತ್ತು ಪೈಶಾಚಿಕ ಸಂಶಯಗಳನ್ನು ಉಂಟುಮಾಡುವವರು ಸಹ ಬರುತ್ತಾರೆ. ಅವರು ಪಿತೂರಿ ಮಾಡಲು ಮತ್ತು ಕಡಿಮೆ ತರ್‌ಬಿಯತ್ ಲಭಿಸಿದವರ ಮನಸ್ಸಿನಲ್ಲಿ ಸಂಶಯಗಳನ್ನು ಉಂಟುಮಾಡಲು ಪ್ರಯತ್ನಿಸುತ್ತಾರೆ. ಜಮಾಅತಿನ ವ್ಯವಸ್ಥೆಯನ್ನು ನಡೆಸಲು ಖರ್ಚುಗಳ ಆವಶ್ಯಕತೆಯಿವೆ ಎಂದೂ ಅವನ ಮಾರ್ಗದಲ್ಲಿ ಖರ್ಚು ಮಾಡ ಬೇಕೆಂಬುದು ಅಲ್ಲಾಹನ ಆಜ್ಞೆಯಾಗಿದೆ ಎಂದೂ ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಸದಸ್ಯರಿಗೆ ಚೆನ್ನಾಗಿ ಗೊತ್ತಿದೆ.

ಅಲ್ಲಾಹನು ಈ ತ್ಯಾಗಗಳನ್ನು ವ್ಯರ್ಥ ಮಾಡುವುದಿಲ್ಲ. ತ್ಯಾಗ ಮಾಡುವವನು ಯೋಚಿಸಿಯೂ ಇರದ ಮಾರ್ಗಗಳಿಂದ ಜೀವನಾಧಾರದ ಸಾಮಾನುಗಳನ್ನು ಒದಗಿಸಲಾಗುವುದು ಎಂಬುದು ಅಲ್ಲಾಹನ ವಾಗ್ದಾನವಾಗಿದೆ. ಅಲ್ಲಾಹನು ತನ್ನ ವಾಗ್ದಾನವನ್ನು ಈಡೇರಿಸುತ್ತಾನೆ. ಜಮಾಅತಿನಲ್ಲಿ ಇಂತಹ ಅನೇಕ

ಉದಾಹರಣೆಗಳು ಇವೆ. ತಮ್ಮ ಬಳಿ ಏನೂ ಇಲ್ಲವಾದರೂ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಿದಾಗ ಅಲ್ಲಾಹನು ಯಾವುದಾದರೂ ಮಾರ್ಗದಿಂದ ಏರ್ಪಾಡು ಮಾಡುತ್ತಾನೆ. ಇದು ಹಳೆಯ ಮಾತೇನೂ ಅಲ್ಲ. ಬದಲಾಗಿ ಇಂತಹ ಅನುಭವಗಳ ಬಗ್ಗೆ ಜನರು ಈಗಲೂ ಬರೆಯುತ್ತಾರೆ. ಅಲ್ಲಾಹನು ವಿಶ್ವಾಸಿಗಳ ವಿಶ್ವಾಸವನ್ನು ಈಗಲೂ ದೃಢಗೊಳಿಸುತ್ತಾನೆ. ಅಲ್ಲಾಹನು ತ್ಯಾಗಮಾಡುವವರ ಮೇಲೆ ಅನುಗ್ರಹ ಸುರಿಸುತ್ತಾನೆ ಎಂದು ಮಾತ್ರವಲ್ಲ, ತ್ಯಾಗ ಮಾಡುವವರ ಸಮೀಪವಿರುವವರ ವಿಶ್ವಾಸವು ಈ ಘಟನೆಗಳಿಂದ ಸುದೃಢವಾಗುತ್ತದೆ. ಇಂದು ನಾನು ಅಂತಹದ್ದೇ ಕೆಲವು ಉದಾಹರಣೆಗಳನ್ನು ಮುಂದಿರಿಸುತ್ತೇನೆ.

(ಅನಂತರ ಹುಝೂರ್ ಗಿನಿಕನಾಕರಿ, ಕೆನಡ, ಸೌತ್ ಆಫ್ರಿಕ, ಆಸ್ಟ್ರೇಲಿಯ, ಕಝಾಕಿಸ್ತಾನ, ಯು.ಕೆ., ಭಾರತ, ಬುರ್ಕಿನಾಫಾಸೋ, ಸೀರಾಲಿಯೋನ್, ಗೇಬೂನ್, ಜೋರ್ಡನ್, ಬೇಲೀಸ್, ಝಂಜಬಾರ್, ಮರಾಕಿಶ್, ಅರ್ಜೆಂಟಿನ, ಲೈಬೀರಿಯ, ಮಾಲಿ ಬೆನಿನ್ ಮುಂತಾದ ದೇಶಗಳಿಂದ ಪುರುಷರ, ಮಹಿಳೆಯರ, ಹಿರಿಯರ, ಮಕ್ಕಳ, ಶ್ರೀಮಂತರ, ಬಡವರ, ಒಟ್ಟಿನಲ್ಲಿ ವಿವಿಧ ವಿಭಾಗಗಳಲ್ಲಿ ಮತ್ತು ಸಮುದಾಯಗಳಲ್ಲಿ ಇರುವ ನಿಷ್ಠಾವಂತ ಅಹ್ಮದಿಯರ ಧನತ್ಯಾಗಗಳ ವಿಶ್ವಾಸವರ್ಧಕ ಘಟನೆಗಳನ್ನು ಪ್ರಸ್ತಾಪಿಸಿದರು. ಈ ಸಂಬಂಧವಾಗಿ ಭಾರತದ ರಾಜ್ಯವಾದ ಕೇರಳದ ಕರುಳಾಯಿ ಜಮಾಅತಿನಲ್ಲಿ ಇರುವ ಶ್ರೀಮಂತರಾದ ಒಬ್ಬ ಸಹೋದರನ ಬಗ್ಗೆ ಹೀಗೆ ಹೇಳಿದರು:) ಅವರು ತಹ್ರೀಕ್ ಜದೀದ್ ಚಂದ ಪಾವತಿಯಲ್ಲಿ ಅಸಾಮಾನ್ಯವಾದ ಆವೇಶವನ್ನು ಸಹ ಹೊಂದಿರುವರು. ಪ್ರತಿ ವರ್ಷ ದೊಡ್ಡ ಸಂಖ್ಯೆಯಲ್ಲಿ ಹಣವನ್ನು ನೀಡುತ್ತಾರೆ. ಈ ವರ್ಷ ಕೊರೋನದ ಕಾರಣದಿಂದ ಉಂಟಾದ ಹೀನಾಯ ಪರಿಸ್ಥಿತಿಯಲ್ಲೂ ಅವರು ಹತ್ತು ಲಕ್ಷ ರೂಪಾಯಿಗಳಿಗೆ ಬದಲಾಗಿ ಸುಮಾರು 18 ಲಕ್ಷ ರೂಪಾಯಿಯನ್ನು ತಹ್ರೀಕ್ ಜದೀದ್ ಚಂದವಾಗಿ ನೀಡಿದರು. ಇನ್ನಷ್ಟು ಹಣವನ್ನು ನೀಡಲು ನಿರ್ಧಾರವನ್ನು ಸಹ ಮಾಡಿರುವರು. ಶ್ರೀಮಂತರಾದ ಅಹ್ಮದಿಯರಲ್ಲೂ ತ್ಯಾಗ ಮನೋಭಾವವನ್ನು ಹೊಂದಿರುವ ಜನರು ಇದ್ದಾರೆ. ಅವರು ಹಣ ಲಭಿಸಿದರೆ, ಅದನ್ನು ಬಚ್ಚಿಡುವುದಿಲ್ಲ. ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡಲು ಅವರು ಪ್ರಯತ್ನಿಸುತ್ತಾರೆ.

ಗಿನಿಕನಾಕರಿಯ ರೀಜನ್ ಆದ ಬೋಕೆ ಎಂಬ ರೀಜನಿನ ಮಿಶನರಿ ಬರೆಯುತ್ತಾರೆ: ಒಬ್ಬ ನಿಷ್ಠಾವಂತ ಸಹೋದರನಾದ ಜಿಬ್ರೀಲ್ ಸಾಹಿಬರು ಬಡಗಿ ಕೆಲಸವನ್ನು ಮಾಡುತ್ತಿದ್ದಾರೆ. ಅವರನ್ನು ಚಂದ ನೀಡುವ ಕಡೆಗೆ ಗಮನ ಸೆಳೆಯಲಾದಾಗ ಅವರು ಹೇಳಿದರು: ನಾನು ಇಂದಿನ ಖರ್ಚಿಗಾಗಿ ಇಪ್ಪತ್ತು ಸಾವಿರ ಫ್ರಾಂಕ್ ಇರಿಸಿದ್ದೇನೆ. ಅದನ್ನು ನಾನು ಚಂದವಾಗಿ ನೀಡುತ್ತೇನೆ. ಇದಲ್ಲದೆ ನಮ್ಮ ಬಳಿ ಬೇರೆ ಏನೂ ಇಲ್ಲ. ಆದರೆ ಅಲ್ಲಾಹನು ನಮ್ಮ ತ್ಯಾಗವನ್ನು ಸ್ವೀಕರಿಸಲಿ ಎಂದಾಗಿದೆ ನಮ್ಮ ಪ್ರಾರ್ಥನೆ. ಜಿಬ್ರೀಲ್ ಸಾಹಿಬ್‌ರು ಹೇಳುತ್ತಾರೆ: ಕಳೆದ ಮೂರು ತಿಂಗಳುಗಳ ಹಿಂದೆ ನಾನು ಮರದ ಒಂದು ಮಂಚವನ್ನು ಮಾರಾಟ ಮಾಡಲು ತಯಾರು ಮಾಡಿದ್ದೆನು. ಆದರೆ ಖರೀದಿ ಮಾಡಲು ಯಾರೂ ಬರುತ್ತಿರಲಿಲ್ಲ. ಚಂದ ನೀಡಿದ ಸ್ವಲ್ಪವೇ ಸಮಯದ ನಂತರ ಒಬ್ಬ ವ್ಯಕ್ತಿ ಅದನ್ನು ಖರೀದಿ ಮಾಡಲು ಬಂದನು. ಅವನು ಒಂದು ಮಿಲಿಯನ್ ಐದು ಲಕ್ಷ ಫ್ರಾಂಕ್ ನೀಡಿ ಅದನ್ನು ಖರೀದಿ ಮಾಡಿದನು. ಆಗ ಜಿಬ್ರೀಲ್ ಸಾಹಿಬ್‌ರು ತಕ್ಷಣವೇ ನಮ್ಮ ಮುಬಲ್ಲಿಗ್‌ರಿಗೆ ಫೋನ್ ಮಾಡಿ ಹೀಗೆ ಹೇಳಿದರು: ಅಲ್ಲಾಹನು ನಮ್ಮ ತ್ಯಾಗವನ್ನು ಸ್ವೀಕರಿಸಿದನು ಎಂದು ಮಾತ್ರವಲ್ಲ, ಹಲವು ಪಟ್ಟು ವರ್ಧಿಸಿ ನಮಗೆ ಮರಳಿ ಕೊಟ್ಟಿರುವನು. ಸ್ನೇಹಿತರ ವಿಶ್ವಾಸವು ಸುದೃಢಗೊಳ್ಳಲು ಅವರು ಈ ಘಟನೆಯನ್ನು ಅವರ ಸ್ನೇಹಿತರಿಗೂ ಹೇಳುತ್ತಿರುತ್ತಾರೆ.

ಇನ್ನು ಮಕ್ಕಳ ತ್ಯಾಗದ ಒಂದು ಅದ್ಭುತಕರವಾದ ದೃಶ್ಯವನ್ನು ನೋಡಿರಿ. ತನ್ಸಾನಿಯದ ಸಮೂಯೆ ಎಂಬ ಸ್ಥಳದ ಮುಅಲ್ಲಿಂ ಸಾಹಿಬ್‌ರು ಬರೆಯುತ್ತಾರೆ: ನಾಲ್ಕನೇ ತರಗತಿಯಲ್ಲಿ ಕಲಿಯುವ ಮೂರು ವಿದ್ಯಾರ್ಥಿಗಳು ಜಮಾಅತಿನಲ್ಲಿ ಇದ್ದಾರೆ. ತಅ್‌ಲೀಂ ಮತ್ತು ತರ್‌ಬಿಯತ್ ಕ್ಲಾಸಿಗಾಗಿ ಅವರು ನಿಯತವಾಗಿ ಮಸೀದಿಗೆ ಬರುತ್ತಾರೆ. ಮೂರೂ ಮಕ್ಕಳ ಮನೆಯವರು ಆರ್ಥಿಕವಾಗಿ ಬಡವರು ಆಗಿರುವರು. ಸ್ಥಿರವಾದ ಯಾವುದೇ ಆದಾಯ ಅವರಿಗೆ ಇಲ್ಲ. ಕಳೆದ ತಿಂಗಳಿಂದ ಈ ಮೂವರು ಮಕ್ಕಳು ಪರಸ್ಪರ ಸ್ಪರ್ಧಿಸುತ್ತಿದ್ದರು. ತಹ್ರೀಕ್ ಜದೀದ್‌ನ ಚಂದಾ ಪಾವತಿಸುವುದಕ್ಕೆ ಸಂಬಂಧಿಸಿ ಸ್ಪರ್ಧಿಸುತ್ತಿದ್ದರು. ಪ್ರತಿಯೊಬ್ಬರೂ ಪ್ರತ್ಯೇಕವಾಗಿ ತಮ್ಮ ಚಂದವನ್ನು ಪಾವತಿಸುತ್ತಿದ್ದರು. ಅವರ ಬಳಿ ಇರುವಷ್ಟು ಹಣವನ್ನು ಪಾವತಿಸಲು ಪ್ರಯತ್ನಿಸುತ್ತಿದ್ದರು. ಹೀಗೆ ಅವರಲ್ಲಿ ಒಬ್ಬನು ಐನೂರು, ಮತ್ತೊಬ್ಬನು ನಾನ್ನೂರು, ಮೂರನೆಯವನು ಏಳುನೂರು ಶಿಲಿಂಗ್. ಹೀಗೆ ಅವರ ಬಳಿಯಿದ್ದ ಹಣವನ್ನು ನೀಡುತ್ತಿದ್ದರು. ನೀವು ತಹ್ರೀಕ್ ಜದೀದಿಗಾಗಿ ಕೊಡಲು ಈ ಹಣವನ್ನು ಎಲ್ಲಿಂದ ತರುತ್ತಿದ್ದೀರಿ ಎಂದು ಒಮ್ಮೆ ಮುಅಲ್ಲಿಂ ಸಾಹಿಬ್‌ರು ಆ ಮಕ್ಕಳೊಡನೆ ಕೇಳಿದರು. ಒಬ್ಬನು ಹೇಳಿದನು: ಕಾಡಿನಿಂದ ಮರವನ್ನು ಕಡಿಯಲಿಕ್ಕಾಗಿ ನನ್ನ ತಾಯಿಯೊಂದಿಗೆ ಸಹಾಯಕ್ಕಾಗಿ ನಾನು ಹೋಗುತ್ತೇನೆ. ಆಗ ಜೇಬುಖರ್ಚಿಗಾಗಿ ಹಣ ಸಿಗುತ್ತದೆ. ಅದರಿಂದ ತಹ್ರೀಕ್ ಜದೀದ್ ಚಂದಾಗಾಗಿ ಇರಿಸುತ್ತೇನೆ. ಚಂದಾ ನೀಡಲು ಶುರುಮಾಡಿದ ಅಂದಿನಿಂದ ಮರವನ್ನು ಖರೀದಿ ಮಾಡಲು ಬೇಗನೇ ಗ್ರಾಹಕರು ಲಭ್ಯವಾಗುತ್ತಾರೆ. ಎಂದಿಗೂ ನಷ್ಟವಾಗುತ್ತಿರಲಿಲ್ಲ. ಮತ್ತೊಬ್ಬ ಹುಡುಗ ಹೇಳಿದನು: ನಾನು ಸಹ ತನ್ನ ಜೇಬು ಖರ್ಚಿನಿಂದ ಚಂದಾಗಾಗಿ ಹಣವನ್ನು ಬೇರೆಯಾಗಿರಿಸುತ್ತೇನೆ. ಮೂರನೆಯ ಹುಡುಗ ಹೇಳಿದನು: ನನ್ನ ಮನೆಯ ಸಮೀಪದ ಮರದಲ್ಲಿ ಹಣ್ಣುಗಳು ಇರುತ್ತವೆ. ತಿಂದ ನಂತರ, ಹೆಚ್ಚಿಗೆಯಾಗಿ ಉಳಿಯುವ ಹಣ್ಣುಗಳನ್ನು ನಾನು ಮಾರಾಟ ಮಾಡುತ್ತೇನೆ. ಅದರಿಂದ ಲಭಿಸುವ ಹಣದಿಂದ ಚಂದಾವನ್ನು ಪಾವತಿಸುತ್ತೇನೆ. ಆ ಮೂರೂ ಮಕ್ಕಳು ಚಂದಾ ಪಾವತಿಯ ಕಾರಣದಿಂದ ಅವರಿಗೆ ಜೀವಿತದಲ್ಲಿ ಅನುಭವವಾಗುತ್ತಿರುವ ನೆಮ್ಮದಿಯ ಬಗ್ಗೆ ಹೇಳುತ್ತಾ ಚಂದಾದ ಅನುಗ್ರಹಗಳನ್ನು ವಿವರಿಸಿದರು. ಅಲ್ಲಾಹನು ಈ ಮಕ್ಕಳ ವಿಶ್ವಾಸ ಮತ್ತು ನಿಷ್ಠೆಯನ್ನು ವರ್ಧಿಸುತ್ತಾ ಹೋಗಲಿ. ಇದಾಗಿದೆ ವಿಶ್ವಾಸ. ಅದರಿಂದ ನಮ್ಮ ಮಕ್ಕಳು ಸಹ ರುಚಿಯನ್ನು ಪಡೆಯುತ್ತಾರೆ.

ಜನರಲ್ಲಿ ಉಂಟಾಗುತ್ತಿರುವ ಪರಿವರ್ತನೆ ಇದಾಗಿದೆ. ಅಲ್ಲಾಹನು ನಮ್ಮಲ್ಲಿ ಪ್ರತಿಯೊಬ್ಬರಿಗೂ ಇಸ್ಲಾಮಿನ ಪ್ರಚಾರಕ್ಕಾಗಿ ತ್ಯಾಗಮಾಡಲು ಸೌಭಾಗ್ಯ ನೀಡಲಿ ಮತ್ತು ತಮ್ಮ ಪರಿಶುದ್ಧ

ಆದಾಯಗಳಿಂದ ತ್ಯಾಗ ಮಾಡುವವರನ್ನಾಗಿ ಮಾಡಲಿ. ಅಲ್ಲಾಹನ ಸನ್ನಿಧಿಯಲ್ಲಿ ಈ ತ್ಯಾಗಗಳು ಸ್ವೀಕಾರಾರ್ಹವೂ ಆಗಲಿ ಮತ್ತು ಅಲ್ಲಾಹನು ನಮ್ಮೊಡನೆ ಸಂಪ್ರೀತನಾಗಲಿ.

ತಹ್ರೀಕ್ ಜದೀದಿನ 87ನೇ ವರ್ಷ ಕೊನೆಗೊಂಡಾಗ, ಅಹ್ಮದಿಯಾ ಜಮಾಅತಿಗೆ ಈ ಸಾಂಪತ್ತಿಕ ವ್ಯವಸ್ಥೆಯಲ್ಲಿ, 15.3 ಮಿಲಿಯನ್ ಪೌಂಡಿನ ಧನತ್ಯಾಗ ಮಾಡಲು ತೌಫೀಕ್ ಲಭಿಸಿದೆ. ಈ ವಸೂಲಿ ಕಳೆದ ವರ್ಷಕ್ಕಿಂತ ಎಂಟು ಲಕ್ಷ 42 ಸಾವಿರ ಪೌಂಡ್‌ನಷ್ಟು ಅಧಿಕವಿದೆ.

(ಇದರೊಂದಿಗೆ ಹುಝೂರ್ ತಹ್ರೀಕ್ ಜದೀದಿನ 88ನೇ ವರ್ಷದ ಘೋಷಣೆಯನ್ನು ಮಾಡಿದರು.)

ಈ ವರ್ಷ ಲೋಕದ ಜಮಾಅತುಗಳಲ್ಲಿ ಮೊದಲ ಸ್ಥಾನ ಜರ್ಮನಿಯದ್ದಾಗಿದೆ. ಪಾಕಿಸ್ತಾನದ ಬಗ್ಗೆ ಹೇಳುವುದಾದರೆ ಅಲ್ಲಿನ ಆರ್ಥಿಕ ಸ್ಥಿತಿ ಬಹಳ ಕೆಟ್ಟು ಹೋಗಿದೆ. ಅಲ್ಲದೆಯೂ ಈಗ ಅವರು ಕಷ್ಟತೆಗಳಿಗೆ ಗುರಿಯಾಗಿರುವರು. ಆದಾಗ್ಯೂ ಅವರು ತ್ಯಾಗಗಳಲ್ಲಿ ಮುಂದಿರುತ್ತಾರೆ. ಅವರಿಗಾಗಿ ದುಆ ಮಾಡಿರಿ. ಅಲ್ಲಾಹನು ಅವರ ಕಷ್ಟತೆಗಳನ್ನು ದೂರಮಾಡಲಿ. ಅವರು ಸಹ ಸ್ವತಂತ್ರವಾಗಿ ತಮ್ಮ ಎಲ್ಲ ಕಾರ್ಯಗಳನ್ನು, ಇಜ್‌ತಿಮಗಳನ್ನು, ಜಲ್ಸಗಳನ್ನು ಮಾಡುವಂತಾಗಲಿ. ಅವರ ತ್ಯಾಗಗಳನ್ನು ಮುಚ್ಚು ಮರೆಯಿಲ್ಲದೇ ಪ್ರಕಟಿಸಲು ಸಾಧ್ಯವಾಗಲಿ. ಈಗಂತು ಸ್ಥಿತಿಗತಿಗಳ ಕಾರಣದಿಂದ ಅವರ ಕೆಲವು ತ್ಯಾಗಗಳನ್ನು ಕೂಡ ಪ್ರಸ್ತಾಪಿಸಲು ಸಾಧ್ಯವಾಗುತ್ತಿಲ್ಲ.

ಈ ವರ್ಷ ಲೋಕದ ಜಮಾಅತುಗಳಲ್ಲಿ ಮೊದಲ ಸ್ಥಾನ ಜರ್ಮನಿಯದ್ದಾಗಿದೆ. ಅನಂತರ ಅನುಕ್ರಮವಾಗಿ ಬ್ರಿಟನ್, ಅಮೇರಿಕ, ಕೆನಡ, ಮಿಡಲ್ ಈಸ್ಟಿನ ಒಂದು ದೇಶ, ಭಾರತ, ಆಸ್ಟ್ರೇಲಿಯಾ, ಇಂಡೋನೇಶ್ಯ, ಘಾನ, ಅನಂತರ ಮಿಡಲ್ ಈಸ್ಟಿನ ಇನ್ನೊಂದು ದೇಶ.

ಹೊಸ ಸೇರ್ಪಡೆಯಾದವರ ವರ್ಧನೆಯ ದೃಷ್ಟಿಯಲ್ಲಿ ಆಫ್ರಿಕದ ದೇಶಗಳಲ್ಲಿ ನೈಜೀರಿಯಾಗೆ ಮೊದಲನೇ ಸ್ಥಾನ. ಅನಂತರ ಅನುಕ್ರಮವಾಗಿ ಗೇಂಬಿಯ, ಸೆನಿಗಾಲ್, ಘಾನ, ತನ್ಸಾನಿಯ, ಗಿನಿಕನಾಕರಿ, ಮಲಾವಿ, ಯುಗಾಂಡ, ಗನಿಬಸಾವು, ಕೋಂಗೋಕನ್ಸಾಶಾ, ಬುರ್ಕಿನಾಫಾಸೋ, ಕೋಂಗೋಬರಾಝ್‌ವಿಲ್.

ಹೊಸ ಸೇರ್ಪಡೆಯಾದವರಲ್ಲಿ ಆಫ್ರಿಕವನ್ನು ಹೊರತುಪಡಿಸಿ ಇತರ ದೊಡ್ಡ ದೇಶಗಗಳಲ್ಲಿ ಮೊದಲ ಸ್ಥಾನ ಜರ್ಮನಿಯದ್ದಾಗಿದೆ. ಅನಂತರ ಅನುಕ್ರಮವಾಗಿ ಬ್ರಿಟನ್, ಹಾಲೇಂಡ್, ಬಾಂಗ್ಲದೇಶ್, ಮೊರಿಶಿಯಸ್‌ನಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ವರ್ಧನೆಯುಂಟಾಗಿದೆ.

ಒಟ್ಟು ವಸೂಲಿನ ದೃಷ್ಟಿಯಲ್ಲಿ ಭಾರತದ ಹತ್ತು ಜಮಾಅತುಗಳ ಹೆಸರುಗಳು ಹೀಗಿವೆ: ಖಾದಿಯಾನಿಗೆ ಮೊದಲನೇ ಸ್ಥಾನವಿದೆ. ಅನಂತರ ಅನುಕ್ರಮವಾಗಿ ಕೋಯಂಬತ್ತೂರ್, ಹೈದರಾಬಾದ್, ಕರುಳಾಯಿ, ಪತ್ತಪಿರಿಯಂ, ಕೋಲ್ಕತ್ತ, ಬೆಂಗಳೂರು, ಕೇರಂಗ್, ಕಾಲಿಕಟ್, ಮತ್ತು ಮೇಲಪಾಲಯಂ.

ತ್ಯಾಗದ ದೃಷ್ಟಿಯಲ್ಲಿ ಮೊದಲ ಹತ್ತು ಸ್ಥಾನದಲ್ಲಿರುವ ಭಾರತದ ರಾಜ್ಯಗಳು ಹೀಗಿವೆ: ಕೇರಳ ಮೊದಲ ಸ್ಥಾನದಲ್ಲಿದೆ. ಅನಂತರ ಅನುಕ್ರಮವಾಗಿ ತಮಿಳುನಾಡು, ಜಮ್ಮು ಕಾಶ್ಮೀರ, ಕರ್ನಾಟಕ, ತೆಲಂಗಾಣ, ಒಡಿಶಾ, ಪಂಜಾಬ್, ಬಂಗಾಳ, ದೆಹಲಿ ಮತ್ತು ಲಕ್ಷದ್ವೀಪ.

ತ್ಯಾಗಮಾಡಿದ ಎಲ್ಲರ ಸಂಪತ್ತು ಮತ್ತು ಸಂತಾನಗಳ ಮೇಲೆ ಅಲ್ಲಾಹನು ಅನುಗ್ರಹ ಸುರಿಸಲಿ ಮತ್ತು ತ್ಯಾಗಗಳನ್ನು ಅಲ್ಲಾಹನು ಸ್ವೀಕರಿಸಲಿ – ಆಮೀನ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّاٰتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُبِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوااللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 05-11-2021*

**Summarized by** *Majlis Ansarullah Bharat*

***Kannada Translation:*** Moulavi Inamullah for Kannada Desk, Qadian

***Reviewed by:*** M.P Ibrahim |***Layout:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon